# ಪ್ರಾರ್ಥನೆ

ದೇವಿ-ಭುಜಂಗ-ಪ್ರಯಾತ-ಸ್ತೋತ್ರದಿಂದ

ವಿನೋದಾಯ ಚೈತನ್ಯಮೇಕಂ ವಿಭಜ್ಯ
ದ್ವಿಧಾ ದೇವಿ ಜೀವಃ ಶಿವಶ್ಚೇತಿ ನಾಮ್ನಾ ।
ಶಿವಸ್ಯಾಪಿ ಜೀವತ್ವಮಾಪಾದಯಂತೀ
ಪುನರ್ಜೀವಮೇನಂ ಶಿವಂ ವಾ ಕರೋಷಿ ॥

(ದೇವಿ-ಭುಜಂಗ-ಪ್ರಯಾತ-ಸ್ತೋತ್ರ, 4)

ಓ ತಾಯಿ, ನೀನು ಲೀಲೆಗಾಗಿ ಒಂದೇ ಅಖಂಡ ಚೈತನ್ಯವನ್ನು ಜೀವ ಮತ್ತು ಶಿವ ಎಂದು ಎರಡಾಗಿ ವಿಭಾಗಿಸಿದೆ. ಶಿವನು ಜೀವತ್ವವನ್ನು ಪಡೆಯುವಂತೆಯೂ ಪುನಃ ಜೀವನನ್ನು ಶಿವನನ್ನಾಗಿಯೂ ನೀನೆ ಮಾಡುತ್ತಿರುವೆ.

ಕದಾ ವಾ ಹೃಷೀಕಾಣಿ ಸಾಮ್ಯಂ ಭಜೇಯುಃ
ಕದಾ ವಾ ನ ಶತ್ರುರ್ನ ಮಿತ್ರಂ ಭವಾನಿ ।
ಕದಾ ವಾ ದುರಾಶಾವಿಷೂಚೀವಿಲೋಪಃ
ಕದಾ ವಾ ಮನೋ ಮೇ ಸಮೂಲಂ ವಿನಶ್ಯೇತ್ ॥

(ದೇವಿ-ಭುಜಂಗ-ಪ್ರಯಾತ-ಸ್ತೋತ್ರ, 19)

ಓ ಜಗಜ್ಜನನೀ, ನನ್ನ ಇಂದ್ರಿಯಗಳು ಶಾಂತವಾಗುವುದು ಯಾವಾಗ? ನನಗೆ ಶತ್ರು, ಮಿತ್ರರಿಬ್ಬರೂ ಇಲ್ಲದಿರುವಂತಾಗುವುದು ಯಾವಾಗ? ದುರಾಸೆಗಳ ಮೋಹದಿಂದ ನಾನು ಬಿಡುಗಡೆ ಹೊಂದುವುದು ಯಾವಾಗ? ನನ್ನ ಮನಸ್ಸು ಸಂಪೂರ್ಣವಾಗಿ ನಾಶ ಹೊಂದುವುದು ಎಂದು?

ಜಗಜ್ಜಾಲಮೇತತ್ತ್ವಯೈವಾಂಬ ಸೃಷ್ಟಂ
ತ್ವಮೇವಾದ್ಯ ಯಾಸೀಂದ್ರಿಯೈರರ್ಥಜಾಲಮ್ ।
ತ್ವಮೇಕೈವ ಕರ್ತ್ರೀ ತ್ವಮೇಕೈವ ಭೋಕ್ತ್ರೀ
ನ ಮೇ ಪುಣ್ಯಪಾಪೇ ನ ಮೇ ಬಂಧಮೋಕ್ಷೌ ॥

(ದೇವಿ-ಭುಜಂಗ-ಪ್ರಯಾತ-ಸ್ತೋತ್ರ, 27)

ಓ ತಾಯಿ, ಈ ಜಗಜ್ಜಾಲವನ್ನು ಸೃಷ್ಟಿಸಿದವಳು ನೀನೆ. ಇಂದ್ರಿಯಗಳ ಮೂಲಕ ನೀನೇ ವಿಷಯಜಾಲದೊಡನೆ ಸಂಪರ್ಕವನ್ನು ಪಡೆಯುತ್ತಿರುವೆ. ನೀನೇ ಕರ್ತೃ ಮತ್ತು ಭೋಕ್ತೃ ಎರಡೂ ಆಗಿದ್ದೀಯೆ. ನನಗೆ ಪುಣ್ಯಪಾಪಗಳೂ ಇಲ್ಲ, ಬಂಧಮೋಕ್ಷಗಳೂ ಇಲ್ಲ. ಎಲ್ಲವೂ ನಿನ್ನ ಲೀಲೆ.

# ಸೂಕ್ತಿಪ್ರಭ

ಆತ್ಮೋದ್ಧಾರಂ ವಿನಾ ಲೋಕೇ
ಪರೋದ್ಧಾರಃ ಸುದುಷ್ಕರಃ ।

ತಾನು ಮೇಲೇರದೆ ಪರರನ್ನು ಮೇಲೆತ್ತಲಾಗದು. —ಸುಭಾಷಿತ.

ಮಾನವನ ಹೃದಯ ಮೂಕವಾದಾಗ ಮಾತ್ರ ಭಗವಂತನು ಕಿವುಡನಾಗುತ್ತಾನೆ. —ಕ್ವಾರ್ಲೀಸ್ (Quarles)

ಚೈತನ್ಯವಿಲ್ಲದ ದೇಹ ಸತ್ತಿರುವಂತೆಯೇ ಸತ್ಕಾರ್ಯವಿಲ್ಲದ ಶ್ರದ್ಧೆಯೂ ಕೂಡ. —ಜೇಮ್ಸ್, 2:26

ಪ್ರೀತಿ ಚಂದ್ರಮನಂತೆ. ಅದು ವೃದ್ಧಿಯಾಗದಿದ್ದರೆ ಕ್ಷೀಣವಾಗುತ್ತ ಬರುತ್ತದೆ. —ಸೆಗೂರ್ (Segur)

ನಾವು ಹೆಚ್ಚು ಕೇಳಬೇಕು ಮತ್ತು ಕಡಮೆ ಹೇಳಬೇಕು ಎಂದು ನಮಗೆ ಎರಡು ಕಿವಿಗಳೂ ಒಂದು ನಾಲಗೆಯೂ ಇವೆ.

—ಡಯೋಜಿನಸ್ (Deogenes)

ಈ ಜೀವನದಲ್ಲಿ ಎರಡು ದುರಂತಗಳಿವೆ : ಒಂದು, ನಮ್ಮ ಹೃದಯದಾಸೆಗಳು ಪೂರ್ತಿಯಾಗದೆ ಇರುವುದು, ಎರಡು, ಅವುಗಳೆಲ್ಲ ಪೂರ್ತಿಯಾಗುವುದು.

—ಬರ್ನಾರ್ಡ್ ಷಾ (Bernard Shaw)

ಎಲ್ಲವನ್ನೂ ಮಾಡಲು ಬಯಸುವವನು ಏನನ್ನೂ ಮಾಡುವುದಿಲ್ಲ. —ಆಂದ್ರಿ ಮೌರಾಯಿಸ್ (Andre Maurois)

ವಿತ್ತೇ ತ್ಯಾಗಃ ಕ್ಷಮಾ ಶಕ್ತಾ ದುಃಖೇ ದೈನ್ಯವಿಹೀನತಾ ।
ನಿರ್ದಂಭತಾ ಸದಾಚಾರೇ ಸ್ವಭಾವೋಽಯಂ ಮಹಾತ್ಮನಾಮ್ ॥

ಹಣವಿದ್ದಾಗ ದಾನ ಮಾಡುವುದು, ಶಕ್ತಿಯಿದ್ದರೂ ಕ್ಷಮೆ ತೋರಿಸುವುದು, ಆಪತ್ತಿನಲ್ಲಿಯೂ ದೈನ್ಯಭಾವ ಇಲ್ಲದೆ ಇರುವುದು, ತನ್ನ ಸದಾಚಾರದ ವಿಷಯದಲ್ಲಿ ದುರಭಿಮಾನವಿಲ್ಲದೆ ಇರುವುದು—ಇವಿಷ್ಟು ಮಹಾತ್ಮರ ಸ್ವಭಾವ. —ಸುಭಾಷಿತ.